ಅವ್ನಂಗೆ ಎರಡು ಶಾರ್ಪ್ ಈಟಿಗಳು ಕ್ರಾಸ್ ಆಕಾರದಲ್ಲಿ ಕಾಣಿಸ್ತಂತೆ! ತಕ್ಷಣ ಅವ್ನ ಶತ್ರುಗಳನ್ನೆಲ್ಲ ಹೊಡೆದ್ ಹಾಕಕ್ಕೆ ಅವ್ನ ಆರ್ಮಿಗೆ ಶಕ್ತಿ ಸಿಗ್ತಂತೆ...'

'ಮೋಸ್ಲೀ ಆ ಸೋ ಕಾಲ್ಡ್ ಎನಿಮಿ ಅವ್ನ ಭ್ರಾಮೈದಾನೇ ಅನ್ಸುತ್ತೆ...?'

'ಎಸ್! ಮಿಸ್ಟರ್ ಕಾನ್ ದ್ ಗ್ರೇಟ್‌ಎಂಪರರ್ ಹೂ ಲೇಟರ್ ಬಿಕೇಮ್ ಆ ಡಿವೋಟಿ ಆಫ್ ಕ್ರೈಸ್ಟ್ ... ಕ್ರಿಸ್ತನ ಕ್ರಾಸ್ ಇಂದ ಸ್ಫೂರ್ತಿ ಪಡೆದು ಶತ್ರುಗಳನ್ನ ಕೊಂದು ಹಾಕಿದ.... '

'ಎಪ್ಪ್... ಇಲ್ಲೂ ಕೂಡ ಇದ್ದಾರಲ್ಲ ಈ ನಿಯೋ ರೋಮನ್ನರು..'

'ಎಸ್ಸ್ ಎಲ್ಲ ಗ್ರೇಟ್ ಚಂಕ್ ಆಫ್ ಲ್ಯಾಂಡೆಲ್ಲ ಅವ್ರದ್ದೇ ಇಲ್ಲಿ... '

'ಸೋ ನೋಡಿದ್ಯಾ ಇತಿಹಾಸದಲ್ಲಿ ಗೋಲ್ಡ್ ಮೆಡಲ್ ಸಿಕ್ಕಿದ್ದು ಇವತ್ತು ಸಾರ್ಥಕ ಆಯ್ತು... ನೋಡ್...' ಎಂದು ಮ್ಯಾಕ್ಸ್ ವಿಕಾಸನ ಬೆನ್ನು ತಟ್ಟಿದ. ವಿಕಾಸ ಬೀಜದ ನೋವು ಒಮ್ಮೆಲೇ ಉಮ್ಮಳಿಸಿದ್ದರಿಂದ ಸಣ್ಣ ಆರ್ತನಾದ ಮಾಡಿ ಎಡ ತೊಡೆಯನ್ನು ಬಲ ತೊಡೆ ಮೇಲಿಟ್ಟು ಅದುಮಿ 'ಅಪ್ಪಾ....! ಏನ್ ಸಾವು ಗೋಲ್ಡ್ ಮೆಡಲ್ ತಗಂಡ್ ... ಪೊಲೀಸ್ ಸ್ಟೇಷನ್ನಿಗೆ ಹೋಗಿ ಹೋಗಿ ಅವ್ರ ಕಂಪ್ಯೂಟರ್ ಸರಿ ಮಾಡೋ ಕರ್ಮ ತಪ್ಪಿಲ್ಲ...'

'ಓ ಈಗ ಆ ಕೆಲ್ಸ ಮತ್ತೆ ಶುರು ಹಚ್ಚಿಕೊಂಡ್ಯಾ...? ನಾನು ಈಗ ಅದೇ ಕಸುಬು ಇಲ್ಲಿ ಶುರು ಮಾಡಿದ್ದೀನಿ'

'ಯಸ್ ಪೊಲೀಸ್ರೆಲ್ಲ ಆನ್‌ಲೈನ್ ಆಕ್ಟಿವೇಟ್ ಆಗಿದ್ದರಿಂದ ನಮ್ಮಂತವರ್ಗೆ ಹೊಟ್ಟೆಪಾಡ್ ನೋಡ್ಕೊಳಕ್ಕೆ ಆಗ್ತಾ ಇದೆ ನೋಡು...'

'ಬಟ್ ನಿನ್ನ ಎಂಟ್ರೋಪಿ ಥಿಯರಿ ರೋಮನ್ನರಿಗೆ ಅಪ್ಲೈ ಆಗಲ್ಲ ನೋಡು... ಯಾಕಂದ್ರೆ ರೋಮ್ ಇಂಟರ್ಗೇಟೆಡ್ ಇನ್ ಟು ಕ್ರಿಶ್ಚ್ ಡಮ್ ಜಸ್ಟ್ ಲೈಕ್ ಅವರ್ ಆನ್‌ಲೈನ್ ಪುಲೀಸ್...'

'ನೆವರ್ ದಿ ಲೆಸ್ ರೋಮನ್ ಪೇಗನ್ ಗಾಡ್ಸ್ ಎಲ್ಲ ಗೋವಿಂದ ಆದ್ರಲ್ಲ... ಎಷ್ಟೆಲ್ಲ ದೇವತೆಗಳಿದ್ರು ...ಎಷ್ಟೆಲ್ಲ ಮಾನ್‌ಸ್ಟರ್‌ಗಳಿದ್ರು... ಎಷ್ಟೆಲ್ಲ ಸ್ಟ್ರೇಂಜ್ ಡೈನಾಮಿಕ್ಸ್‌ಗಳಿದ್ವು... ಎಲ್ಲ ಮಣ್ಣುಪಾಲು... ರೋಮ್ ಹುಟ್ಟಿದ್ದೇ ಗ್ರೀಕ್ ಬೇರಿಂದ... ಇವೆಲ್ಲ ಕಾನ್ಸ್ಟೇಟೇಂಟಿನ್ ಕತ್ತಿ ದೆಸೆಯಿಂದ ನಿರ್ನಾಮ ಆಯ್ತಲ್ಲ...'

'ನಿಜ... ಜ್ಯೂಗಳ ಮುಕ್ಕೋಟಿ ದೇವಮಾನವ-ಮಾನವರೆಲ್ಲ ಹಂಗೇ ಆದ್ರು ಕ್ರಿಸ್ತ ಬಂದ್ಮೇಲೆ... ಎಷ್ಟು ಕಾಂಪ್ಲೆಕ್ಸ್ ಆಂಡ್ ಡೈವರ್ಸಿಫೈಯಡ್ ಆಗಿದ್ದ ಸಿಸ್ಟಮ್ಮ್ ಮತ್ತೆ ಸಿಂಗ್ಯುಲರ್ ಆಗ್ತಾ ಬಂತು....ಆದ್ರೂ ಜ್ಯೂಗಳು ಮಾತ್ರ....'

'ಅವ್ರಿನ್ನೂ ಕಾಯ್ತಾನೇ ಇದ್ದಾರಲ್ಲ ಅವ್ರ ಪ್ರವಾದಿ ಬರುತ್ತಾನೆ ಅಂತ... ಜ್ಯೂಗಳ ಕಥೆ ಬಿಡು... ಪ್ರಾಕ್ಟಿಕಲ್ ಆಗಿ ನೋಡೋದಾದ್ರೆ ಈ ಕಡೆ ಇರೋ ನಿಯೋರೋಮನ್ನುಗಳ ತರ ನಿಮ್ಮ್ ಅಪ್ಪ, ಅಮ್ಮ, ತಾತ ಎಲ್ಲ ನಿನ್ಗೂ ಒಳ್ಳೇ ಕಡೆ ಲ್ಯಾಂಡೆಲ್ಲ ಇಟ್ಟಿಲ್ವಾ... ಎಸ್ಟೇಟು... ತೋಟದ ಮನೆ.... ಸಿಟಿ ಮಧ್ಯ ಲಾನ್ ಇರೋ ಅಷ್ಟು ವಿಶಾಲ ಜಾಗದಲ್ಲಿ ಮನೆ.... ಅದನ್ನೇ ಪಿ.ಜಿ ಸೆಂಟರ್ ಆಗಿ ಕನ್ವರ್ಟ್ ಮಾಡಿದ್ರಂತೂ ಕೂತಲ್ಲೇ ಕಾಸು... '

'ಅಯ್ಯೋ ನಾವೆಲ್ಲ ಲುಥೇರಿಯನ್ನರಪ್ಪ... ನಮಗೆಲ್ಲ ಇಲ್ಲಿ ಜಾಗ ಇಲ್ಲ...'

'ಅದ್ರಲ್ಲೂ ನೀನ್ ಅಂತು ಬಿಡು ವಿಚಿತ್ರವೀರ್ಯ....! ನಿನ್ಗೇ ಎಲ್ಲೂ ಜಾಗ ಇಲ್ಲ...!'

'ನಮ್ಮಂತವರ್ಗೇ ಜಾಗ ಸಿಗೋದು 'ಬಲ್ಲೆ' ಅಂತಾರಲ್ಲ ಇಲ್ಲಿ ಜನ...ಅದೇ ಕಮ್ಯುನಿಸ್ಟ್ ಪೊದೆಗಳಲ್ಲೇ...!'

'ಕಮ್ಯುನಿಸ್ಟೊಳಗೆ ಮಿಶಿನಿಶ್ಟ್...! ಅಂತ ಒಂದ್ ನಾಟ್ಕ ಬೇರೆ ಬರ್ದಿದ್ದ ಆ ಸ್ಕ್ರೀನ್ ರೈಟರ್...?'

'ಯಸ್ಸ್... ನಮ್ಮ ಯೂನಿವರ್ಸಿಟಿಲಿ ಒಬ್ಬ ಇದ್ದ ಅಲ್ವ...! ದೊಡ್ಡ ಮುಷ್ಟಿ ಅವ್ನು... ಅವ್ನ ಈ ನಾಟ್ಕನ ಬಾರಿ ಹೊಗಳ್ತಾ ಇದಾ... ಇನ್ ಫ್ಯಾಕ್ಟ್ ಅವ್ನಿಗೆ ನಾನೇ ಕೊಟ್ಟಿದ್ದು ಆ ನಾಟ್ಕನ...'

'ಅವ್ನ ನಿಜ್ವಾದ ಹೆಸ್ರೇ ಮರ್ತೆ ಹೋಗಿದೆ ನೋಡು.... ಎಲ್ಲ ಅವ್ನ ಕಾಮೂ ಅಂತಾ ಇದ್ರಲ್ಲ!'

'ಅದೇ ದೊಡ್ಡ ಕಾಮಿ ಮತ್ತೆ ಜಟ್ಕ ಅವ್ನು.... ಅದಕ್ಕೇ ಅವ್ನಿಗೆ ಕಾಮೂ ಅಂತಾನೇ ನಾಮಕರಣ ಮಾಡಿದ್ರಲ್ಲ ಹಾಸ್ಟೆಲಲ್ಲಿ! ಒಂದಾ ಪಾರ್ನ್ ನೋಡೋದು...ಇಲ್ಲಾ ಅಂದ್ರೇ ಆನ್‌ಲೈನ್ ಡರ್ಟಿ ಸೆಕ್ಸ್ ಚಾಟ್ ಮಾಡೋದು... ಬರೀ ಹುಡ್ಗಿರ್ದೇ ಗೀಳು ಅವ್ನಿಗೆ, ಒಂದ್ ಹುಡ್ಗಿನೂ ಗಿಟ್ಟಿಲ್ಲ ಕೊನೆಗೂ! ಒಂದ್ ಸಲ ಯೂನಿವರ್ಸಿಟಿ ಟಾಪರ್ ಇದ್ಲಲ್ಲ ಅವ್ಳು... ಏನ್ ಅವ್ಳ ಹೆಸ್ರು... ಹ್ಞಾ. ಸೌಮ್ಯ.... ಅವ್ಳಗೇ ಕಂಗ್ರಾಜ್ಯುಲೇಷನ್ ಹಾಕಿದ್ರಲ್ಲ ಮ್ಯಾಗಜೀನಲ್ಲಿ.... ಆ ಫೋಟೊ ನೋಡ್ಕೊಂಡ್